ಓ. ಎಸ್. ನಂಃ 81/2017

ಡಿ. ಡಬ್ಲ್ಯೂಃ 1

ದಿಃ 01-06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್.ಕೆ.ಎ ವಾದಿ ಪರ ವಕೀಲರಿಂದ ಃ

ನಾನು ಈ ದಾವೆಯಲ್ಲಿ ತಕರಾರನ್ನು ಹಾಕಿದ್ದು ಅದರಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇರುತ್ತದೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಈ ದಾವಾ ಆಸ್ತಿಯ ನಂಬರ 81 ಇರುತ್ತದೆ. ನನ್ನ ಆಸ್ತಿಯ ನಂಬರ 66 ಇರುತ್ತದೆ. ಈ ದಾವಾ ಆಸ್ತಿಯನ್ನು ವಾದಿ ತಿಪ್ಪಣ್ಣನವರ ಅಣ್ಣನಾದ ಅರ್ಜುನಪ್ಪರವರು ಖರೀದಿ ಮಾಡಿದ್ದರು ಎಂದರೆ ಸರಿ. ಈ ದಾವಾ ಆಸ್ತಿ ಮೂಲತಃ ಬಸವಂತಪ್ಪ , ಕಣಕಪ್ಪ ತಳವಾರ ರವರ ಆಸ್ತಿ ಇತ್ತು ಎಂದರೆ ಸರಿ. ಇವರಿಂದ ಅರ್ಜುನಪ್ಪ ರವರು 1965 ದಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿ. ಸದರಿ ಬಸವಂತಪ್ಪ ಮತ್ತು ಕಣಕಪ್ಪ ಮಾಡಿಕೊಟ್ಟಿರುವ ಖರೀದಿ ಕಾಗದದಲ್ಲಿ ಅಳತೆ ಕೂಡ ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಕಾಗದದಲ್ಲಿ ಪೂರ್ವ-ಪಶ್ಚಿಮ 20 ಮೊಳ ಮತ್ತು ಉತ್ತರ- ದಕ್ಷಿಣ 70 ಮೊಳ ಎಂದು ನಮೂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಕೊಟ್ಟಿರುವ ಜಾಗ ಮೊದಲು ಖುಲ್ಲಾ ಜಾಗ ಇತ್ತು ಎಂದರೆ ಸಾಕ್ಷಿಯು ಪಡಾ ಜಾಗ ಇತ್ತು ಎಂದು ನುಡಿಯುತ್ತಾರೆ.ಸದರಿ ಪಡಾ ಜಾಗವನ್ನು ಪಂಚಾಯಿತಿಯಲ್ಲಿ ಇ.ಟಿ.ಸಿ 60 ಎಂದು ಸಂಖ್ಯೆ ಇರುತ್ತದೆ ಎಂದರೆ ಸಾಕ್ಷಿಯು 65 ಇರುತ್ತದೆ ಎಂದು ನುಡಿಯುತ್ತಾರೆ . ಅರ್ಜುನಪ್ಪ ರವರು ತಾವು ಖರೀದಿ ಮಾಡಿದ ಜಾಗದಲ್ಲಿ ದನದ ಮನೆಯನ್ನು , ಲ್ಯಾವೇಟರಿ, ಕಟ್ಟಿಗೆ ಬಣವೆ, ಹುಲ್ಲಿನ ಬಣವೆ ಮತ್ತು ವಕ್ಕಲುತನದ ಸಾಮಾನು ಇಟ್ಟಿದ್ದರು ಎಂದರೆ ಸರಿಯಲ್ಲ. ಅರ್ಜುನಪ್ಪ ರವರು ದಿ.18-09-2009 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅರ್ಜುನಪ್ಪ ರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸಾಕ್ಷಿಯು ಲಗ್ನ ಆಗಿತ್ತು ಮಕ್ಕಳು ಇದ್ದಾರೋ ಇಲ್ಲವೋ ನನಗೆ ಗೊತ್ತಿಲ ಎಂದು ನುಡಿಯುತ್ತಾರೆ .

2. ಅರ್ಜುನಪ್ಪ ತೀರಿಕೊಂಡ ನಂತರ ಅವರದು ಯಾರು ವಾರಸುದಾರರು ಇಲ್ಲದೇ ಇದ್ದ ಕಾರಣ ವಾದಿ ತಿಪ್ಪಣ್ಣ ಅರ್ಜುನಪ್ಪ ರವರ ತಮ್ಮನಾಗಿದ್ದು ದಾಖಲೆಯಲ್ಲಿ ತನ್ನ ಹೆಸರನ್ನು ವಾರಸುದಾರರು ಎಂದು ಬರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅರ್ಜುನಪ್ಪ ತೀರಿಕೊಂಡ ನಂತರ ಅವರ ಆಸ್ತಿ ಸಂಖ್ಯೆ 60 ಅವರ ತಮ್ಮ ತಿಪ್ಪಣ್ಣರವರ ಹೆಸರಿನಲ್ಲಿ ಪಂಚಾಯಿತಿಯಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದರ ಸಂಖ್ಯೆ 65 ಇರುತ್ತದೆ ಎಂದು ನುಡಿಯುತ್ತಾರೆ . ತಿಪ್ಪಣ್ಣರವರು ದಾವಾ ಆಸ್ತಿಯಲ್ಲಿ ದನದ ಮನೆಯನ್ನು , ಲ್ಯಾವೇಟರಿ, ಕಟ್ಟಿಗೆ ಬಣವೆ, ಹುಲ್ಲಿನ ಬಣವೆ ಮತ್ತು ವಕ್ಕಲುತನದ ಸಾಮಾನುಗಳನ್ನು ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ.2 ನೇ ವಾದಿಗೆ ಸರಕಾರದ ವತಿಯಿಂದ ಬಸವ ವಸತಿ ಯೋಜನೆ ಅಡಿಯಲ್ಲಿ ಒಂದು ಮನೆ ಮಂಜೂರು ಆಗಿರುತ್ತದೆ ಎಂದರೆ ಸಾಕ್ಷಿಯು ಆಸ್ತಿ ಸಂಖ್ಯೆ 60/1-2 ರಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ . ಸದರಿ ಆಸ್ತಿಯಲ್ಲಿ ಪಂಚಾಯಿತಿಯವರು ಜಿ .ಪಿ.ಎಸ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ವಾದಿಯು 2 ನೇ ವಾದಿಗೆ ಆಸ್ತಿ ಸಂಖ್ಯೆ 60 ರಲ್ಲಿ ವರದಿ ಪ್ರಕಾರ ಸ್ವಲ್ಪ ಭಾಗ ಮನೆಕಟ್ಟಲು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬಿಟ್ಟು ಕೊಟ್ಟ ನಂತರ ಪಂಚಾಯಿತಿ ಉತಾರದಲ್ಲಿ 2 ನೇ ವಾದಿಯ ಹೆಸರಿನಲ್ಲಿ 60/2 ಎಂದು ಆಸ್ತಿ ಸಂಖ್ಯೆ ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಉತಾರ ಇರುವುದಿಲ್ಲ ಎಂದು ನುಡಿಯುತ್ತಾರೆ. ಗ್ರಾಮ ಪಂಚಾಯಿತಿ ಯವರು 2 ನೇ ವಾದಿಯ ಹೆಸರಿನಲ್ಲಿ ಇರುವ ಆಸ್ತಿ ಸಂಖ್ಯೆ 60/2 ರಲ್ಲಿ ಮನೆಕಟ್ಟಲು ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ಈ ದಾವೆಯಲ್ಲಿ ಏನು ದಾಖಲೆಗಳನ್ನು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಗಳು ಈ ದಾವೆಯಲ್ಲಿ ಎನೇನು ದಾಖಲೆಗಳನ್ನು ಹಾಕಿರುತ್ತಾರೆ ಎಂಬ ಮಾಹಿತಿ ನನಗೆ ನನ್ನ ವಕೀಲರು ತಿಳಿಸಿರುವುದಿಲ್ಲ. ನಿಪಿ-1 ನ್ನು ಪಂಚಾಯಿತಿಯವರು 2 ನೇ ಪ್ರತಿವಾದಿಯ ಹೆಸರಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಕೊಟ್ಟಿಯಾಗಿ ಕೊಟ್ಟಿರಬಹುದು ಎಂದು ನುಡಿಯುತ್ತಾರೆ . ನಿಪಿ-1 ಕೊಟ್ಟ ನಂತರ 2 ನೇ ವಾದಿಯು ಅದರಲ್ಲಿ ಪಾಯಾ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಪಾಯಾ ಕಟ್ಟಿದಕ್ಕೆ ಪಂಚಾಯಿತಿರವರು ಅದರಲ್ಲಿ ಜಿಪಿಎಸ್ ಮಾಡಿ ಕಾಮಗಾರಿ ಹಣ ಕೂಡ ಅವರಿಗೆ ಹೋಗಿರುತ್ತದೆ ಎಂದರೆ ಸಾಕ್ಷಿಯು ರಸ್ತೆ ಮೇಲೆ ಪಾಯಾ ಕಟ್ಟಿರುತ್ತಾರೆ ಎಂದು

ನುಡಿಯುತ್ತಾರೆ. ಪಂಚಾಯಿತಿ ಯವರ ಆದೇಶದ ಮೇರೆಗೆ ಆಸ್ತಿ ನಂಬರ 60/2 ರಲ್ಲಿ 2 ನೇ ವಾದಿಯು ಮನೆ ಕಟ್ಟಲು ಕಚ್ಚಾ ಸಾಮಾನುಗಳನ್ನು ಸಂಗ್ರಹ ಮಾಡಿ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. 2 ನೇ ವಾದಿಯು ಆಸ್ತಿ ಸಂಖ್ಯೆ 60/2 ರಲ್ಲಿ ಪಾಯಾ ಹಾಕಿ ಅಲ್ಲಿ ಕಚ್ಚಾ ಸಾಮಗ್ರಿಗಳು ಸಂಗ್ರಹಿಸಿರುತ್ತಾರೆ ಎಂದು ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ಆಸ್ತಿ ಸಂಖ್ಯೆ 65 ರಲ್ಲಿ ಅವರು ಮನೆಯನ್ನು ಕಟ್ಟುತ್ತಿದ್ದಾರೆ ಎಂದು ನುಡಿಯುತ್ತಾರೆ . ನಾನು ಸರಕಾರಿ ರಸ್ತೆಯಲ್ಲಿ ವಾದಿಯು ಮನೆಯನ್ನು ಕಟ್ಟುತ್ತಿದ್ದಾರೆ ಎಂದು ಹೇಳಿದ್ದು ಯಾವುದೇ ಪಂಚಾಯಿತಿಯವರು ಸರಕಾರಿ ರಸ್ತೆಯಲ್ಲಿ ಮನೆ ಕಟ್ಟಲು ಆದೇಶ ಕೊಡುವುದಿಲ್ಲ ಎಂದರೆ ಸಾಕ್ಷಿಯು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

3. ನನ್ನ ಆಸ್ತಿ ಯುಪಿಸಿ ನಂಬರ 66 ರ ಚಕಬಂದಿ ನನಗೆ ಹೇಳಲು ಬರುತ್ತದೆ. ನನ್ನ ಆಸ್ತಿಯ ಪೂರ್ವಕ್ಕೆ ಬಸವನಗೌಡ ಹಿರಿಯಗೌಡರ ಅವರ ಆಸ್ತಿ , ಪಶ್ಚಿಮಕ್ಕೆ ಅರ್ಜುನಪ್ಪ ಶಿವಪ್ಪ ತಳವಾರ ಇವರ ಆಸ್ತಿ , ಉತ್ತರಕ್ಕೆ ಗೌಟಾನ (ಸರಕಾರಿ ಜಾಗ) , ದಕ್ಷಿಣಕ್ಕೆ ಸರಕಾರಿ ರಸ್ತೆ ಇರುತ್ತದೆ. ದಕ್ಷಿಣಕ್ಕೆ ಸರಕಾರಿ ರಸ್ತೆಯಿಂದ ನನ್ನ ಆಸ್ತಿಗೆ ಅಡ್ಡಾಡುತ್ತೇನೆ ಎಂದರೆ ಸರಿ. ದಕ್ಷಿಣಕ್ಕೆ ಇರುವ ಸರಕಾರಿ ರಸ್ತೆ ನನ್ನ ಆಸ್ತಿಗೆ ಮುಗಿಯುತ್ತದೆ ಎಂದರೆ ಸಾಕ್ಷಿಯು ಇನ್ನೂ ಮುಂದುವರೆಯುತ್ತದೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಅರ್ಜುನಪ್ಪ ರವರ ಆಸ್ತಿ ಇದೆ ಎಂದು ನಾನು ಹೇಳಿದ್ದು ಸದರಿ ಅರ್ಜುನಪ್ಪ ರವರು ವಾದಿಯ ಸಹೋದರ ಎಂದರೆ ನನಗೆ ಮಾಹಿತಿ ಇಲ್ಲ. ನನ್ನ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ರುವ ಅರ್ಜುನಪ್ಪ ರವರ ಆಸ್ತಿ ಸಂಖ್ಯೆ 60 ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ 65 ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಆಸ್ತಿಯ ಪಶ್ಚಿಮಕ್ಕೆ ಇರುವ ಆಸ್ತಿಯ ಸಂಖ್ಯೆ 65 ಇದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ನನ್ನ ಆಸ್ತಿಯ ಪಶ್ಚಿಮಕ್ಕೆ ವಾದಿಯವರ ಆಸ್ತಿ 60 ಇದ್ದು 1 ನೇ ವಾದಿಯು ವರದಿಕೊಟ್ಟ ನಂತರ ಉತಾರದಲ್ಲಿ ಅದರ ಸಂಖ್ಯೆ 60/1 ಮತ್ತು 60/2 ಎಂದು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಆಸ್ತಿ ಸಂಖ್ಯೆ 60/1 1 ನೇ ವಾದಿಯ ಹೆಸರಿನಲ್ಲಿ ಹಾಗೂ 60/2 2 ನೇ ವಾದಿಯ ಹೆಸರಿನಲ್ಲಿ ದಾಖಲು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಇಲ್ಲ ಆ ನಂಬರಿಗೆ ಆಗಿರುವುದಿಲ್ಲ

ಎಂದು ನುಡಿಯುತ್ತಾರೆ. 2 ನೇ ವಾದಿಯು ಮನೆಕಟ್ಟುತ್ತಿರುವ ಆಸ್ತಿಗು ಮತ್ತು ನನ್ನ ಆಸ್ತಿಗೂ ಸುಮಾರು 12 ಪೂಟ ಅಂತರ ಇರುತ್ತದೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.